ಘಟಿಸುತ್ತದೆ... ಅವಳು ಬದುಕಿದ್ದರೆ ತನ್ನ ಏಕಮಾತ್ರ ಪುತ್ರನ ನಾಶವನ್ನು ನೋಡಬೇಕಿತ್ತು' ಎಂದರು ಫಿಲಿಪ್.

ನಾನು ಫಿಲಿಪ್‌ರ ಮಾತಿನ ಅರ್ಥವನ್ನು ಅರಿತುಕೊಳ್ಳುತ್ತಿದ್ದೆ. ಜೀವನದ ಬಗ್ಗೆ ದೂರುಗಳನ್ನು ಹೇಳಲಾಗುತ್ತದೆ. ಕೆಟ್ಟ ಸಂಗತಿಗಳು ನಡೆಯುತ್ತವೆ, ತಪ್ಪಾಗುತ್ತವೆ. ಆದರೆ ಮನುಷ್ಯ ಇನ್ನೊಬ್ಬನೊಂದಿಗೆ ಸಾಕಷ್ಟು ತಯಾರಿಸುತ್ತಾನೆ, ನಿರ್ಮಾಣವನ್ನೂ ಮಾಡುತ್ತಾನೆ. ಆದರೆ ಯಾವುದೂ ಶಾಶ್ವತವಲ್ಲ. ನನಗೆ ಮನುಷ್ಯಜೀವನದ ಕ್ಷಣ ಭಂಗುರತೆಯ ಬಗ್ಗೆ ತೀವ್ರವಾದ ಅನುಭವವಾಯಿತು.

ನಾನು ಲಾರಾರ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದೆ. ಲಾರಾ ಹಿಲಸೋಂಗ್ ಕ್ರಿಮೇಶನ್ ಚರ್ಚ್‌ನಲ್ಲಿನ ಶವದ ಪೆಟ್ಟಿಗೆಯಲ್ಲಿ ಮೌನವಾಗಿ ಮಲಗಿದ್ದರು. ಅವರ ಮೇಲೆ ಹೂವಿನ ಮಳೆಗರೆಯಲಾಗುತ್ತಿತ್ತು. ಲಾರ್ಸ್ ಸಹ ತನ್ನ ತಾಯಿಯ ಅಂತಿಮ ಸಂಸ್ಕಾರದಲ್ಲಿ ಭಾಗವಹಿಸಿದ್ದ, ಆದರೆ ಎಲ್ಲವನ್ನೂ ಫಿಲಿಪ್ ನೋಡಿಕೊಳ್ಳುತ್ತಿದ್ದರು. ಅಂತಿಮ ಸಂಸ್ಕಾರದ ಏರ್ಪಾಟುಗಳನ್ನು ಮಾಡುವುದು ದೊಡ್ಡ ಮತ್ತು ತೊಡಕಿನ ಕೆಲಸವೆಂಬುದನ್ನು ನಾನು ಅಪ್ಪನ ಸಾವಿನಲ್ಲಿ ಮನಗಂಡಿದ್ದೆ. ನೀವು ಯಾವ ವಿಧದ ಅಂತ್ಯಕ್ರಿಯೆಯನ್ನು ಬಯಸುತ್ತೀರ? ಶವವನ್ನು ಎಷ್ಟು ದಿನಗಳವರೆಗೆ ಇಟ್ಟುಕೊಳ್ಳಲು ಬಯಸುತ್ತೀರ? ಯಾರನ್ನು ಕರೆಯಲು ಬಯಸುತ್ತೀರ? ಎಂಥ ಭೋಜನ ಹಾಕುತ್ತೀರ? – ಹೀಗೆ ಶೋಕದ ಆ ಸಮಯದಲ್ಲಿ ಅನೇಕ ತೀರ್ಮಾನವನ್ನು ಮಾಡಬೇಕಾಗುತ್ತದೆ. ಲಾರ್ಸ್‌ಗೆ ತನ್ನ ಬಗ್ಗೆಯೇ ಪ್ರಜ್ಞೆಯಿರಲಿಲ್ಲ; ಈಗ ಇದನ್ನು ಮಾಡು, ಈಗ ಅದನ್ನು ಮಾಡು, ಈಗ ಅಲ್ಲಿಗೆ ಹೋಗು ಎಂದು ದಣಿದ, ಛಿದ್ರವಾದ ಲಾರ್ಸ್‌ಗೆ ಮಾರ್ಗದರ್ಶನ ಮಾಡಬೇಕಾಗುತ್ತಿತ್ತು...

ಲಾರ್ಸ್‌ನ ಪರಿವಾರದಲ್ಲಿ ಹೆಚ್ಚು ಜನರಿಲ್ಲವೆಂದು ನನಗೆ ಸದಾ ಅನ್ನಿಸುತ್ತಿತ್ತು. ಆದರೆ ಇಂಥ ಸಂದರ್ಭದಲ್ಲಿ ಸಾಕಷ್ಟು ಸಂಬಂಧಿಕರು ಕಲೆಯುತ್ತಿದ್ದರು. ಲಾರಾರ ಮಾಜಿ ಪತಿ ಡೇನಿಯಲ್ ಬಂದಿದ್ದರು. ಸ್ವೀಡನ್‌ನಿಂದ, ಜರ್ಮನಿಯಿಂದ, ನಾರ್ವೆಯಿಂದಲೂ ಪರಿಚಿತರು ಮತ್ತು ಸಂಬಂಧಿಕರು ಬಂದಿದ್ದರು. ಮಿತ್ರರು ಮತ್ತು ಅಕ್ಕಪಕ್ಕದವರು ಸೇರಿ ಸುಮಾರು ಹದಿನೈದು ಇಪ್ಪತ್ತು ಜನರಿದ್ದರು. ಎಲ್ಲರೂ ಲಾರಾರ ಜೊತೆಗಿದ್ದಾಗಿನ ತಮ್ಮ ಕ್ಷಣಗಳನ್ನು ನೆನಪಿಸಿಕೊಂಡರು. ಕೆಲವರು ತಮ್ಮ ಐದು ನಿಮಿಷಗಳ ಭಾಷಣದಲ್ಲಿ ಲಾರಾರ ಸಂಪೂರ್ಣ ವ್ಯಕ್ತಿತ್ವವನ್ನು ವರ್ಣಿಸಿದರು. ಕೆಲವರು ಲಾರಾರ ಸಕಾರಾತ್ಮಕ ಮಗ್ಗಲುಗಳು ಮತ್ತು ಅವರ ಕೊಡುಗೆಗಳು ಹಾಗೂ ಅವರ ಜೀವನದಲ್ಲಿ ಎದುರಾದ ಕಷ್ಟಗಳ ಬಗ್ಗೆ ಹೇಳಿದರು. ಲಾರಾ ಬಯಸಿದಾಗ್ಯೂ ತಮ್ಮ ಮಗನನ್ನು ಸದಾ ತಮ್ಮ ಬಳಿ ಇಟ್ಟುಕೊಳ್ಳದಾದರು, ಲಾರ್ಸ್‌ನ ಜೀವನದ ಆರಂಭದ ದಿನಗಳು ಕಮ್ಯೂನ್‌ನ ಹಾಸ್ಟಲ್‌ನಲ್ಲಿ ಕಳೆದಿದ್ದವು ಎಂಬ ಮಾತುಗಳೂ ಕೇಳಿ ಬಂದವು.

ಒಬ್ಬ ವ್ಯಕ್ತಿಯ ವಿಷಯದಲ್ಲಿ ಅನೇಕ ಸಂಗತಿಗಳು, ಆ ವ್ಯಕ್ತಿ ಸತ್ತ ನಂತರವೇ ತಿಳಿಯುತ್ತವೆ. ಅಂದು ಲಾರಾರ ಅಂತಿಮ ಸಂಸ್ಕಾರದಲ್ಲಿ ನನಗೆ ಅವರ ಬಗ್ಗೆ ಸಾಕಷ್ಟು ವಿಷಯಗಳು ತಿಳಿದವು; ಈ ವಿಷಯಗಳು ನನಗೆ ಈ ಮೊದಲು ಗೊತ್ತಿರಲಿಲ್ಲ. ಆದರೆ ಲಾರಾ ಈ ಜಗತ್ತಿನಿಂದ ಅಕಸ್ಮಾತ್ ಹೊರಟುಹೋದದ್ದು ನನಗೆ ಅತೀವ ದುಃಖವನ್ನುಂಟು ಮಾಡಿತು. ಅವರು ನನ್ನನ್ನು ಭೇಟಿಯಾಗಲು ಆಸ್ಪತ್ರೆಗೆ ಬಂದಾಗ, ಅದು ಅವರೊಂದಿಗಿನ ನನ್ನ ಅಂತಿಮ ಭೇಟಿಯಾಗಿತ್ತು. ಸದ್ಯ, ನಾನು ಅವರಲ್ಲಿ ವ್ಯರ್ಥವಾಗಿ ಹರಟಲಿಲ್ಲ. ಅವರಿಗೆ ಧನ್ಯವಾದವನ್ನಷ್ಟೇ ಹೇಳಿದೆ. ಒಟ್ಟಿನಲ್ಲಿ, ಲಾರಾ ಓರ್ವ ಸಜ್ಜನ ಮಹಿಳೆಯಾಗಿದ್ದರು. ಅವರೊಂದಿಗಿನ ನನ್ನ ಒಡನಾಟ ಸಾಕಷ್ಟು ಸುಖಕರವಾಗಿದೆ; ಕಾಡಿನಲ್ಲಿ ಪ್ರವಾಸ ಕೈಗೊಳ್ಳುವುದು, ಉಗುರುಗಳಿಗೆ ನೇಲ್ ಪಾಲಿಶ್ ಮಾಡಿಸಿಕೊಳ್ಳುವುದು, ಕೆಫೆಯಲ್ಲಿ ಭೇಟಿಯಾಗುವುದು, ಒಟ್ಟಿಗೆ ಸಿನಿಮಾ ನೋಡುವುದು, ಅವರ ನಾಯಿಯನ್ನು ನೋಡಿಕೊಳ್ಳುವುದು, ಹೀಗೆ ಅವರೊಂದಿಗಿನ ನನ್ನ ಸುಖಕರ ನೆನಪುಗಳಿವೆ... ನನಗೆ ವಾಸ್ತವವಾಗಿ ಅವರ ಸಾವಿನ ಬಗ್ಗೆ ಅತೀವ ದುಃಖವಾಯಿತು.

ನನಗೆ ಫಿಲಿಪ್‌ರಿಂದ ಮತ್ತೆ ಫೋನ್ ಬಂತು, 'ಲಾರಾ ಕೆಲವು ವಸ್ತುಗಳನ್ನು ನಿನಗಾಗಿ ಬಿಟ್ಟು ಹೋಗಿದ್ದಾರೆ, ಬಂದು ತೆಗೆದುಕೊಂಡು ಹೋಗು. ಅವಳ ಮನೆಯ ಬೀಗದ ಕೈ ನನ್ನ ಬಳಿಯಿದೆ...'

'ನನಗೇನೂ ಬೇಡ. ನನ್ನ ಮೇಲೆ ಅವರಿಗೆ ಯಾವುದೇ ಅಧಿಕಾರವಿಲ್ಲ. ನಾನು ಲಾರ್ಸ್‌ನಿಂದ ಬೇರೆಯಾಗಿದ್ದೇನೆ. 'ಹೈನಸನ್' ಸರನೇಮ್ ತೆಗೆದು ಹಾಕಿ ನನ್ನ ತಂದೆಯವರ ಸರ್‌ನೇಮ್ ಹಾಕಿಕೊಳ್ಳಿದ್ದೇನೆ. ಲಾರ್ಸ್ ಮುಂದೆ ಮತ್ತೆ ಮದುವೆ ಮಾಡಿಕೊಂಡರೆ, ಅವನ ಹೊಸ ಹೆಂಡತಿಗೆ ಅವನ್ನೆಲ್ಲಾ ಕೊಡಿ' ಎಂದೆ.

'ಓಹ್... ಆ ದಿನ ಯಾವಾಗ ಬರುತ್ತೋ ಗೊತ್ತಿಲ್ಲ; ಬರುತ್ತೋ ಇಲ್ವೋ ಅನ್ನೋದೂ ಗೊತ್ತಿಲ್ಲ' ಫಿಲಿಪ್ ಉದಾಸೀನರಾಗಿ ಹೇಳಿದರು.

ನಂತರ ಏನೋ ಯೋಚಿಸಿ ದೃಢಚಿತ್ತದಿಂದ ಹೇಳಿದರು, 'ನೋಡು, ಲಾರ್ಸ್‌ನೊಂದಿಗೆ ನಿನ್ನ ಸಂಬಂಧ ಎಂಟು–ಒಂಬತ್ತು ವರ್ಷಗಳಿಂದ ಇತ್ತು. ಲಾರಾ ಈ ವಸ್ತುಗಳನ್ನು ನಿನಗೆ ಕೊಡುವಂತೆ ಹೇಳಿದಾಗ, ನೀನು ಅವರ ಸೊಸೆಯಾಗಿದ್ದೆ. ಹೀಗಾಗಿ ಅವೆಲ್ಲವೂ ನಿನ್ನ ನಿಧಿಯಾಗಿದೆ. ನೀನು ಬಂದು ನನ್ನಿಂದ ಅದನ್ನೆಲ್ಲಾ ತೆಗೆದುಕೊಂಡು ಹೋಗು. ಆಮೇಲೆ ಅವುಗಳನ್ನು ಏನು ಮಾಡಬೇಕೋ ಮಾಡು. ನನಗೇನೂ ಗೊತ್ತಿಲ್ಲ. ನಾನಂತೂ ಲಾರಾಳ ಕೆಲಸವನ್ನು ಈಡೇರಿಸಬೇಕಾಗಿದೆ...' ಫಿಲಿಪ್‌ರ ಧ್ವನಿಯಲ್ಲಿ ವ್ಯಗ್ರತೆಯಿತ್ತು.

ನನಗೆ ಮೊದಲ ಬಾರಿಗೆ ಫಿಲಿಪ್‌ರ ಬಗ್ಗೆ ಕರುಣೆ ಮೂಡಿತು. ಲಾರಾರಿಗೆ ಪತಿಯಿದ್ದರು, ಪುತ್ರನಿದ್ದ, ಆದರೆ ಅವರ ಕೊನೆಯ ಕಾಲದಲ್ಲಿ ಅವರ ಸಹೋದರರೇ ಅವರ ಉಪಯೋಗಕ್ಕೆ ಬಂದಿದ್ದರು. ಲಾರಾ ಸಾಮಾನ್ಯವಾಗಿ ನನಗೆ, 'ನನ್ನ ಸಹೋದರ ವ್ಯವಸ್ಥಿತವಾಗಿ, ಯೋಜನೆಗೆ ಬದ್ಧನಾಗಿ ಇರುವುದಿಲ್ಲ. ಅವನು ಡಿಪ್ರೆಶನ್‌ಗೆ ಬಲಿಯಾಗಿದ್ದಾನೆ. ಅವರ ಮನೆಗೆ ಹೋದರೆ ಎಲ್ಲವೂ ಅವ್ಯವಸ್ಥಿತವಾಗಿರುತ್ತವೆ. ನಾನೇ ಹೋಗಿ, ಮನೆಯನ್ನು ಸ್ವಚ್ಛ ಮಾಡುತ್ತೇನೆ' ಎಂದು ಹೇಳುತ್ತಿದ್ದರು. ಇಂದು ಸಹೋದರ, ಸಹೋದರಿಯ ಮನೆಯನ್ನು ನೋಡುತ್ತಿದ್ದರು. ನಾವು ಜೀವನದಿಂದ ಏನು ಬಯಸುತ್ತೇವೆ ಎಂಬುದು ಮುಖ್ಯವಲ್ಲ, ಜೀವನ ನಮ್ಮಿಂದ ಏನು ಬಯಸುತ್ತದೆ ಎಂಬುದೂ ಮುಖ್ಯ.

ನಾನು ಲಾರಾರ ಮನೆಗೆ ಹೋದೆ. ಫಿಲಿಪ್ ಸಹ ಅಲ್ಲಿಗೆ ಮನೆಯ ಬೀಗದ ಕೈ ಮತ್ತು ಅಬ್ಬಿಯೊಂದಿಗೆ ಬಂದರು. ಲಾರಾ ಇಲ್ಲದ ಮನೆ ವಿಚಿತ್ರವಾಗಿ ಕಂಡಿತು, ಆದರೂ ನಾವಿಬ್ಬರು ಅಲ್ಲಿ ಕೂತು ಸ್ವಲ್ಪ ಹರಟೆ ಹೊಡೆದೆವು. ಅವರ ಮನೆಯಲ್ಲಿ ಚಹಾ ಸಹ ಮಾಡಿದೆ.

'ಹೂಂ, ಪ್ರಾರಂಭ ಮಾಡೋಣ' ಎಂದು ಫಿಲಿಪ್ ತಮ್ಮ ಫೈಲ್‌ನಿಂದ ಒಂದು ಪತ್ರವನ್ನು ಹೊರಗೆ ತೆಗೆದರು.

ಲಾರಾ ಬ್ರೈನ್ ಸರ್ಜರಿಗೂ ಮೊದಲೇ ತಮ್ಮ ವಸ್ತುಗಳನ್ನು ವಿತರಿಸಿದ್ದರು. ಇನ್ನು ತಾವು ಬದುಕುವುದಿಲ್ಲವೆಂದು ಅವರಿಗೆ ಅನ್ನಿಸಿತ್ತು. ಅವರು ನನಗೆ ಬಿಟ್ಟುಹೋದ ವಸ್ತುಗಳಲ್ಲಿ ಲ್ಯಾಂಪ್, ಕೆಲವು ಕ್ರಾಕರಿಗಳು, ಒಂದು ರೂಬಿ ಪರ್ಲ್ ಜ್ಯುವೆಲರಿ ಸೆಟ್, ಒಂದು ಬ್ಲೇಜರ್ ಮತ್ತು ಅಬ್ಬಿ ಇತ್ತು. ನಾನು ಅವರನ್ನು ಭೇಟಿಯಾದಾಗ ಮತ್ತು ಅವರೊಂದಿಗೆ ಮಾತನಾಡುವಾಗ, ಯಾವುದನ್ನು ಪ್ರಶಂಸಿಸಿದ್ದೆನೋ, ಆ ವಸ್ತುಗಳನ್ನೆಲ್ಲಾ ಅವರು ನನಗೆ ಕೊಟ್ಟಿದ್ದರು ಎಂಬುದನ್ನು ನಾನು ಮನಗಂಡೆ.

'ಓಹ್, ಈ ಲ್ಯಾಂಪ್ ತುಂಬಾ ಚೆನ್ನಾಗಿದೆ... ಎಲ್ಲಿಂದ ಕೊಂಡಿರಿ?'

'ಟರ್ಕಿಯಿಂದ.'

ಅವರ ಬೋನ್ ಚೈನಾದ ಚಹಾ ಕಪ್–ಪ್ಲೇಟ್ ನನಗೆ ಸದಾ ತುಂಬಾ ಇಷ್ಟವಾಗುತ್ತಿತ್ತು. ಅವರು ತಮ್ಮ ರೂಬಿಯ ಸೆಟ್ ಧರಿಸಿದಾಗ, ನಾನು ಸದಾ ಹೊಗಳುತ್ತಿದ್ದೆ. ಮತ್ತೆ ಬ್ಲೇಜರ್... ಆ ವರ್ಷ ನಾನು ಮತ್ತು ಲಾರ್ಸ್ ನಮ್ಮ ಮನೆಯಲ್ಲಿ ಕ್ರಿಸ್‌ಮಸ್ ಸಮಾರಂಭವನ್ನು ಏರ್ಪಡಿಸಿದ್ದೆವು. ಲಾರ್ಸ್‌ನ ತಂದೆ–ತಾಯಿ, ಮಾವ ಮತ್ತು ಲಾರ್ಸ್‌ನ ಅಜ್ಜಿ ಸಹ ಜಟ್‌ಲ್ಯಾಂಡಿನಿಂದ ಬಂದಿದ್ದರು. ಲಾರ್ಸ್‌ನ ತಂದೆ–ತಾಯಿ ವಿಚ್ಛೇದನವನ್ನು ಪಡೆದಿದ್ದರು. ಆದರೆ ಅವರು ವಿಶೇಷ ಸಮಾರಂಭಗಳಲ್ಲಿ ಪರಸ್ಪರ ಭೇಟಿಯಾಗುತ್ತಿದ್ದರು. ಅವರು ತುಂಬಾ ಶಿಷ್ಟತೆಯಿಂದ ಪರಸ್ಪರ ವರ್ತಿಸುತ್ತಿದ್ದರು. ಲಾರ್ಸ್‌ನ ಜನ್ಮದಿನವಾಗಿರಲಿ, ಕ್ರಿಸಮಸ್ ಆಗಿರಲಿ ಅಥವಾ ಬೇರಾವುದೇ ಸಮಾರಂಭವಾಗಿರಲಿ... ಸಮಾರಂಭದ ಸಂಪೂರ್ಣ ಆನಂದವನ್ನು ಅನುಭವಿಸುತ್ತಿದ್ದರು. ಅವರನ್ನು ನೋಡಿದಾಗ, ಅವರ ನಡುವೆ ಯಾವುದೇ ಮನಸ್ತಾಪವಿಲ್ಲವೆಂದು ತೋರುತ್ತಿತ್ತು.

ಆ ಕ್ರಿಸ್‌ಮಸ್‌ಗೆ ಲಾರಾ ಹಸುರು ಬಣ್ಣದ ಹೊಸ ಬ್ಲೇಜರ್ ಧರಿಸಿ ಬಂದಿದ್ದರು, ತಮ್ಮ ತಾಯಿಯನ್ನು ವ್ಹೀಲ್ ಚೇರಿನಲ್ಲಿ ಕರೆತಂದಿದ್ದರು.

'ಬ್ಲೇಜರ್ ತುಂಬಾ ಚೆನ್ನಾಗಿದೆ' ನಾನು ಅವರ ಬ್ಲೇಜರನ್ನು ತುಂಬಾ ಹೊಗಳಿದೆ.

(ಸಶೇಷ)